"ಶ್ರೀನಿವಾಸ, ಬಾ ಇಲ್ಲಿ."

"ಅಪ್ಪಚ್ಚಿ" ಶ್ರೀನಿವಾಸ ಬಂದು ನಿಂತ.

"ಆಸರಿ ಆತಾ?"

"ಆತು ಅಪ್ಪಚ್ಚಿ."

"ನೋಡು, ನಿನ್ನನ್ನು ಇಷ್ಟು ದಿನ ಸಾಕಿದೆವು. ನೀನು ಯಾವ ಕೆಲಸಕ್ಕೂ ಲಾಯಕ್ಕಿಲ್ಲ. ಇನ್ನೂ ಎಷ್ಟು ದಿನ ನಿನ್ನ ಹೊಟ್ಟೆಗೆ ಹಾಕೋಣ? ಮೂರೂ ಹೊತ್ತೂ ದೇವರ ಪೂಜೆ ಎನ್ನುತ್ತ ಮೂಗು ಮುಚ್ಚಿ ಕುಳಿತುಕೊಳ್ಳುತ್ತಿ. ಅದನ್ನೇ ಮಾಡಿಕೊಂಡಿರು. ಆದರೆ ನೀನೀಗ ಮನೆ ಬಿಟ್ಟು ಹೋರಡಬೇಕು."

**ಹುಟ್ಟೂರಿನಿಂದ ಈ ದೇವರುಗಳೇ ಅಲ್ಲವೇ ನನ್ನನ್ನು ಹೊರಗೆ ಕರೆದುಕೊಂಡು ಬಂದದ್ದು? ಅಂದ ಮೇಲೆ ನೀವೇ ಹೇಳಿರಿ, ನೀವೂ, ನಾನೂ ಎಲ್ಲಿರಬೇಕೆಂದು ನಿರ್ಧರಿಸಿರಿ ಎಂದು ಆಂಜನೇಯನೊಡನೆ ಶ್ರೀನಿವಾಸನ ಹಟ.**

"ಅಂದರೆ ಅಪ್ಪಚ್ಚಿ..."

"ಹೌದು, ನೀನು ಮನೆ ಬಿಟ್ಟು ಹೊರಡಬೇಕು. ನಿನ್ನ ಭವಿಷ್ಯ ನೀನೇ ರೂಪಿಸಿಕೋ."

"ಈ ದೇವರನ್ನೆಲ್ಲ ಬಿಟ್ಟು ಹೇಗಿರಲಿ?"

"ಬಿಡಬೇಡ. ನಿನಗೆ ಯಾವ್ಯಾವ ದೇವರ ಮೂರ್ತಿ ಬೇಕು, ಹೇಳು, ಅದನ್ನೆಲ್ಲ ಚೀಲದಲ್ಲಿ ತುಂಬಿಕೊಂಡು ಇನ್ನೊಂದು ಗಂಟೆಯೊಳಗೆ ಹೊರಟುಬಿಡು."

ಶ್ರೀನಿವಾಸ ನಮಸ್ಕರಿಸಬೇಕೆನ್ನುವುದರೊಳಗೆ ಚಿಕ್ಕಪ್ಪಂದಿರು ಎದ್ದು ಹೋಗಿದ್ದರು. ಚಿಕ್ಕಮ್ಮಂದಿರು ಅಳುತ್ತಿರುವುದು ಕೇಳಿಸಿತು. ಮಾನವಾಗಿ ತನ್ನ ದೇವರುಗಳೊಡನೆ ಶ್ರೀನಿವಾಸ ಮನೆಯಿಂದ ಹೊರಬಿದ್ದ.

"ಇಂಥ ಅವಮಾನವನ್ನು ನೀವು ಸೈರಿಸಿಕೊಳ್ಳಬಲ್ಲಿರೋ?" ಎಂದು ಶ್ರೀನಿವಾಸ ಪೂಜಿಸುತ್ತ ದೇವರುಗಳನ್ನು ಪ್ರಶ್ನಿಸಿದ್ದಾನೆ. "ನಾನು ಸೈರಿಸಿಕೊಂಡಿದ್ದೇನೆ. ನಿಮ್ಮನ್ನು ಹೊತ್ತುಕೊಂಡು ಬಂದಿದ್ದೇನೆ. ಹುಡುಗನಿಗೆ ಆಸರಿಗೇನು, ಊಟಕ್ಕೇನು ಚಿಂತೆಯಿಲ್ಲ ನಿಮಗೆ. ನಿಮ್ಮನ್ನು ನಾನು ಮೀಯಿಸಿ, ಕುಂಕುಮ ಹಚ್ಚಿ, ಮಂತ್ರ ಹೇಳಿ ಉಪಚರಿಸಬೇಕು. ಆಹಾಹಾಹಾ..." ಎಂದು ಸಿಟ್ಟಿಗೆದ್ದು ಕೂಗಾಡಿದರೂ ಆ ದೇವತಾ ಮೂರ್ತಿಗಳು ತೆಪ್ಪಗಿರುತ್ತಿದ್ದುದರಿಂದ ಕೆಲಸಲ ಪಾಪ ಅನಿಸುವುದು. ಅವರನ್ನು ಎದೆಯ ಮೇಲಿಟ್ಟುಕೊಂಡು ನಿದ್ದೆ ಹೋಗುವನು.

ಸಿದ್ದೇಶ್ವರದ ಭಟ್ಟರು ಒತ್ತಾಯ ಮಾಡಿ ಆಸರಿ ಕುಡಿಸಿದರು. ಇವನಿಗೆ ಅಳು ಬಂತು. "ಎಲ್ಲಾಯಿತು ನಿನಗೆ?" ಎಂದರು. "ಅದನ್ನು ಮಾತ್ರ ಕೇಳಬೇಡಿ" ಎಂದು ಇವನು ಕೈ ಮುಗಿದ. "ಈ ಊರಿನಿಂದ ಮುಂದೆ ಯಾವ ಊರು?" ಎಂದು ಕೇಳಿದ. "ದೇವರಬಾವಿ, ತೊರ್ಕೆ, ಸಾಣಿಕಟ್ಟೆ, ಮುಂದೆ ಗೋಕರ್ಣ" ಎಂದರು. "ಹ್ಹಾ, ಗೋಕರ್ಣ?" ಎಂದ. ಅವನ ಚಕಿತ ಮುಖ ನೋಡಿ "ಯಾಕೆ, ಏನು ವಿಶೇಷ? ಅಲ್ಲಿಗೆ ಹೋಗಬೇಕೇನು?" ಎಂದರು. "ಅಲ್ಲಿ ಈಶ್ವರ ಇದ್ದಾನಲ್ಲ, ಮೂವತ್ತುಮೂರು ಕೋಟಿ ದೇವರುಗಳೂ ಅಲ್ಲೇ ಇದ್ದಾರೆ ಎಂದು ಕೇಳಿದ್ದೇನೆ" ಎಂದ ಶ್ರೀನಿವಾಸ. "ಹೌದು, ಪುರಾಣಗಳಲ್ಲಿ ಹಾಗಿದೆ" ಎಂದರು ಭಟ್ಟರು. "ಸರಿ, ನಾನಿನ್ನು ಬರುತ್ತೇನೆ" ಎಂದು ಶ್ರೀನಿವಾಸ ಗೋಕರ್ಣಾಭಿಮುಖವಾಗಿ ಹೊರಟೇಬಿಟ್ಟ.

ಗೋಕರ್ಣದಲ್ಲಿ ಆಗಲೇ ಅಷ್ಟೊಂದು ದೇವತೆಗಳಿರುವಾಗ ತನ್ನ ದೇವರಿಗೆ ನೆಲೆ ಸಿಕ್ಕಲು ಸಾಧ್ಯವೇ